Comp.No: 98767

ಸಂ:ಪಿಸಿಸಿಎಫ್(ಅಪಮು)/ಬಿ3/ಸಿಬ್ಬಂದಿ/ಸಿಆರ್-16/2019-20

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು, ಅರಣ್ಯ ಪಡೆ) ರವರ ಕಛೇರಿ,
ಅರಣ್ಯ ಭವನ, ಮಲ್ಲೇಶ್ವರಂ,
ಬೆಂಗಳೂರು-3, ದಿನಾಂಕ: 04-06-2019.

## ಅಧಿಕೃತ ಜ್ಞಾಪನ

ವಿಷಯ: ಸಿವಿಲ್ ಅಪೀಲು ಸಂಖ್ಯೆ:2368/2011ರ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯ ನೀಡಿರುವ ತೀರ್ಪಿನ ಹಿನ್ನೆಲೆ ಮೇಲೆ ದಿನಾಂಕ:27.04.1978 ರಿಂದ ದಿನಾಂಕ:31.12.2012 ರವರೆಗೆ ಪ್ರಥಮ ದರ್ಜೆ ಆಕೃತಿ ರಚನೆಕಾರರ ರಾಜ್ಯ ಮಟ್ಟದ ಕರಡು ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ:
1. ಈ ಕಛೇರಿ ಅಧಿಕೃತ ಜ್ಞಾಪನ ಪತ್ರ ಸಂಖ್ಯೆ:ಪಿಸಿಸಿಎಫ್ (ಅಪಮು)/ಬಿ3/ಸಿಬ್ಬಂದಿ/ಸಿಆರ್-144/2017-18 ದಿನಾಂಕ: 30-12-2017.
2. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 186 ಎಸ್‌ಆರ್‌ಎಸ್ 2018 ಬೆಂಗಳೂರು ದಿನಾಂಕ:27-02-2019.
3. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 186 ಎಸ್‌ಆರ್‌ಎಸ್ 2018 ಬೆಂಗಳೂರು ದಿನಾಂಕ:15-05-2019.

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ(1)ರಡಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲ್ ಸಂಖ್ಯೆ:2368/2011 – ಶ್ರೀ ಬಿ.ಕೆ.ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ:09-02-2017 ರಂದು ನೀಡಿದ ತೀರ್ಪಿನನ್ವಯ ಪ್ರಥಮ ದರ್ಜೆ ಆಕೃತಿ ರಚನೆಕಾರರ ರಾಜ್ಯ ಮಟ್ಟದ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸಲಾಗಿರುತ್ತದೆ.

ಆದರೆ, ಉಲ್ಲೇಖ(3)ರ ಸರ್ಕಾರ ಆದೇಶದಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಿವಿಲ್ ಅಪೀಲ್ ಸಂಖ್ಯೆ:2368/2011 – ಶ್ರೀ ಬಿ.ಕೆ.ಪವಿತ್ರ ಮತ್ತು ಇತರರು ವಿರುದ್ಧ ಯೂನಿಯನ್ ಆಫ್ ಇಂಡಿಯಾ ಪ್ರಕರಣಕ್ಕೆ ಸಂಬಂಧಿಸಿದಂತೆ, ನೀಡಿರುವ ತೀರ್ಪಿನನ್ವಯ ಉಲ್ಲೇಖ(2)ರ ಆದೇಶ ದಿನಾಂಕ:27-02-2019ರಲ್ಲಿ ಕಂಡಿಕೆ 8ರ ಉಪ ಕಂಡಿಕೆ(1)ರನ್ವಯ ಕ್ರಮ ತೆಗೆದುಕೊಂಡ ನಂತರ, ಸದರಿ ಆದೇಶದ ಕಂಡಿಕೆ 8ರ ಉಪ ಕಂಡಿಕೆ(2)ರಲ್ಲಿ ಉಲ್ಲೇಖಿಸಲಾದ, ಕರ್ನಾಟಕ ರಾಜ್ಯ ಸಿವಿಲ್ ಸೇವಾ (ಮುಂಬಡ್ತಿ, ವೇತನ ಮತ್ತು ಪಿಂಚಣಿಗಳ ಕ್ರಮಬದ್ಧತೆ) ಅಧಿನಿಯಮ, 1973ರ ಸೆಕ್ಷನ್ 4,5 ಮತ್ತು 6ನ್ನು ಸೆಕ್ಷನ್ 9 ರೊಡನೆ ಸಹವಾಚನ ಮಾಡಿಕೊಂಡು, ಇವುಗಳನ್ವಯ ತಾತ್ಕಾಲಿಕ/ಅಂತಿಮ ಜೇಷ್ಠತಾ

ಪಟ್ಟಿಗಳನ್ನು ತಯಾರಿಸಿ ಪ್ರಕಟಿಸುವ, ಅರ್ಹತಾ ದಿನಾಂಕಗಳನ್ನು ನಿಗದಿಪಡಿಸುವ, ಮುಂಬಡ್ತಿಗಳನ್ನು ಪುನರಾವಲೋಕನೆ ಮಾಡುವ, ವೇತನ ಮತ್ತು ಪಿಂಚಣಿಗಳನ್ನು ನಿಗದಿಪಡಿಸುವುದನ್ನು ಒಳಗೊಂಡ ಪ್ರಕ್ರಿಯೆಯನ್ನು ಈ ಆದೇಶ ಹೊರಡಿಸಿದ ಗರಿಷ್ಠ ಮೂವತ್ತು ದಿನಗೊಳಗಾಗಿ ಪೂರ್ಣಗೊಳಿಸತಕ್ಕದ್ದು ಎಂದು ಆದೇಶಿಸಿರುತ್ತಾರೆ.

ಉಲ್ಲೇಖ(2) & (3)ರ ಸರ್ಕಾರದ ಮಾರ್ಗಸೂಚಿಯನುಸಾರ ಪ್ರಥಮ ದರ್ಜೆ ಆಕೃತಿ ರಚನೆಕಾರರ ವೃಂದದ ಕರಡು ಜೇಷ್ಠತಾ ಪಟ್ಟಿಯನ್ನು ದಿನಾಂಕ: 27.04.1978 ರಿಂದ ದಿನಾಂಕ: 31.12.2012 ರವರೆಗೆ ಅನುಬಂಧದಲ್ಲಿರುವಂತೆ ಈ ಮೂಲಕ ಎಲ್ಲಾ ಸಂಬಂಧಪಟ್ಟವರ ಮಾಹಿತಿಗಾಗಿ ಪ್ರಕಟಿಸಿದೆ.

ಮುಂದುವರೆದು, ಈ ಕರಡು ಜೇಷ್ಠತಾ ಪಟ್ಟಿಯ ಕುರಿತು ಬಾಧಿತರಾದವರು ಆಕ್ಷೇಪಣೆಗಳನ್ನು ಕರಡು ಜೇಷ್ಠತಾ ಪಟ್ಟಿ ಪ್ರಕಟಿಸಿದ **07 ದಿನದೊಳಗಾಗಿ** ಆಕ್ಷೇಪಣೆಗಳನ್ನು ಮೇಲಾಧಿಕಾರಿಗಳ ಮುಖಾಂತರ ಸಲ್ಲಿಸತಕ್ಕದ್ದು. ನಿಗಧಿತ ಅವಧಿಯೊಳಗೆ ಈ ಕಛೇರಿಗೆ ತಲುಪದೇ, ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
(ಅರಣ್ಯ ಪಡೆ, ಮುಖ್ಯಸ್ಥರು)

ಪ್ರತಿಯನ್ನು ಮಾಹಿತಿ ಮತ್ತು ಅಗತ್ಯ ಕ್ರಮಕ್ಕಾಗಿ:-

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಬೆಂಗಳೂರು.
3. ಎಲ್ಲಾ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
4. ಎಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ.
5. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಮಾಹಿತಿ, ಸಂವಹನ ಮತ್ತು ತಂತ್ರಜ್ಞಾನ, ಅರಣ್ಯ ಭವನ, ಬೆಂಗಳೂರು ಇವರಿಗೆ ಇಲಾಖೆಯ ಅಂತರ್ಜಾಲದಲ್ಲಿ ಕೂಡಲೇ ಪ್ರಕಟಿಸಲು ತಿಳಿಸಿದೆ.

ಅನುಬಂಧ

**ಕರ್ನಾಟಕ ಅರಣ್ಯ ಇಲಾಖೆಯ ಪ್ರಥಮ ದರ್ಜೆ ಆಕೃತಿ ರಚನೆಕಾರರ ವೃಂದದ ದಿನಾಂಕ: 27.04.1978 ರಿಂದ ದಿನಾಂಕ: 31.12.2012 ರವರೆಗೆ ಕರಡು ಜೇಷ್ಠತಾ ಪಟ್ಟಿ**

| ಕ್ರ ಸಂ. | ಹೆಸರು | ಪ್ರವರ್ಗ | ನೇರ / ಬಡ್ತಿ | ಹುಟ್ಟಿದ ದಿನಾಂಕ | ಸರ್ಕಾರಿ ಸೇವೆಗೆ ಸೇರಿದ ದಿನಾಂಕ | ಅರ್ಹತಾ ದಿನಾಂಕ |
|---|---|---|---|---|---|---|
| 1 | ವಿಷ್ಣು | SC | PR | 16-07-1965 | 21-11-1984 | 22-06-1988 |
| 2 | ಪಿ. ಬಿ. ನಾಗರಾಜಪ್ಪ | ST | PR | 22-07-1965 | 02-03-1996 | 01-12-2001 |
| 3 | ಕೆ. ನಾರಾಯಣ ಮೂರ್ತಿ | | PR | 30-07-1948 | 01-06-1973 | 01-08-2004 |
| 4 | ಎಂ. ಆರ್. ಶಿವಪ್ಪ | | PR | 21-03-1947 | 25-06-1976 | 01-08-2004 |
| 5 | ಡಿ. ಎಲ್. ಪಾಟೀಲ್ | | PR | 22-07-1959 | 19-11-1984 | 02-07-2012 |
| 6 | ಎ. ಲಕ್ಷ್ಮೀಕಾಂತ | | PR | 28-08-1963 | 17-11-1984 | 02-07-2012 |

ದಿನಾಂಕ:04-06-2019

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಮುಖ್ಯಸ್ಥರು, ಅರಣ್ಯ ಪಡೆ)